ಮಲೆಯಾಳ ಮೂಲ: ಇ. ಹರಿ ಕುಮಾರ್ ಕನ್ನಡಕ್ಕೆ: ಮೋಹನ್ ಕುಂಟಾರು

# ಮುಗಿಸಲಾಗದ ಪಯಣ



ತನ್ನ ದೇಹವನ್ನು ಅಪ್ಪಿದ್ದ ಅವನ ಎಳೆಯ ತೋಳುಗಳನ್ನು ಮೆಲ್ಲನೆ ಸರಿಸಿ ಮೊಳೆತು ಬರುತ್ತಿರುವ ಕುಡಿ ಮೀಸೆಯ ಕೆಳಗಿನ ತುಟಿಗಳಿಗೆ ತುಟಿ ಸೇರಿಸಿ ಕೊನೆಯದಾಗಿ ಚುಂಬಿಸಿ ಬಿಚ್ಚಿದ್ದ ಲಂಗದ ಲಾಡಿಯನ್ನು ಸೇರಿಸಿ ಹಿಡಿದು ಆಕೆ ಎದ್ದಳು. ಸೀರೆಯನ್ನು ಕೈಗೆತ್ತಿಕೊಂಡು ಆಗಲೂ ಮಲಗಿಯೇ ಇದ್ದ ಜಯನನ್ನು ಕರೆದಳು.

'ಏಳು, ನೀನಿನ್ನು ಹೋಗುವ ವೇಳೆಯಾಯಿತು' ಆಗಲೇ ಕೋಣೆಯಲ್ಲಿ ಕತ್ತಲು ಕಳೆಯತೊಡಗಿತ್ತು. ಮರದ ಜಾಲಕಗಳಿರುವ ಕಿಟಕಿಯ ಮೂಲಕ ಕಾಣುವ ಮರಗಳು ನೆರಳುಗಳಾಗಿ ಬದಲಾದವು. ಅದಕ್ಕಿಂತಲೂ ಆಚೆ ಕೊಯಿಲು ಮುಗಿದ ಹೊಲಗಳಲ್ಲಿ ಬೆಳಕು ಸ್ಫುರಿಸಿ ನಿಂತಿತು. ಹೊರಗಡೆ ಗಿಳಿಗಳ ಅಸ್ಪಷ್ಟ ಶಬ್ದಗಳು ಕೇಳಿಬಂದವು.

ನಾನು ನಾಳೆಯೂ ಬರುತ್ತೇನೆ. ಅದಕ್ಕೆ ಮೇಡಂ ಒಪ್ಪದೆ ಇದ್ದರೆ ನಾನು ಹೋಗುವುದೇ ಇಲ್ಲ.

ಮುಂದುವರಿಸುವುದಕ್ಕೆ ಅಸಾಧ್ಯವಾದ ಸಂಬಂಧದ ಕುರಿತಾಗಿ, ಅವನ ಮುಂದಿನ ಜೀವನದ ಕುರಿತಾಗಿ ಸ್ನೇಹ ಸಂಬಂಧಗಳು ಎಂದೂ ಸ್ಥಿರವಾಗಲಾರವೆಂದು. ಅದರಿಂದಾಗಿ ಸ್ನೇಹ ಸಂಬಂಧಗಳ ಹೊಸತನ ಕಳೆದು ಹೋಗುವ ಮೊದಲೇ ನಿಲ್ಲಿಸುವುದು ಒಳ್ಳೆಯದೆಂದೂ ಮತ್ತೆ ಮುಂದುವರಿದರೆ ಬರಬಹುದಾದ ಅಪವಾದದ ಕುರಿತು ಕಳೆದ ಒಂದು ಗಂಟೆಯಿಂದಲೂ ಅವಳು ಜಯನಿಗೆ ತಿಳಿಯ ಹೇಳುತ್ತಿದ್ದಳು.

ಅವನಿಗೆ ಹದಿನೆಂಟು ವರ್ಷವಷ್ಟೇ ಆಗಿತ್ತು. ಆ ವಯಸ್ಸಿನಲ್ಲಿ ಬುದ್ಧಿ ಹೃದಯಕ್ಕೆ ದಾರಿ ತೋರಿಸಿಕೊಡುತ್ತದೆ— ಎಂದು ಇಪ್ಪತ್ತಾರು ವರ್ಷ ವಯಸ್ಸಾದ ಗ್ರೇಸಿ ಮೇಡಂಗೆ ಗೊತ್ತಿದೆ.

'ಏಳು, ಒಳ್ಳೆಯ ಹುಡುಗನಾಗು' ಅವಳು ಕೈನೀಡಿದಳು. ವಿಧೇಯನಾದ ಹುಡುಗನಂತೆ ಅವನು ಆಕೆ ನೀಡಿದ ಮೃದುವಾದ ಕೈಗಳನ್ನು ಹಿಡಿದು ಮೇಲಕ್ಕೆದ್ದ. ತಲೆಗೂದಲನ್ನು ಕೈಯಿಂದ ನೇವರಿಸಿಕೊಂಡ. ಪುಸ್ತಕವನ್ನು ಕೈಯಲ್ಲೆತ್ತಿಕೊಂಡು ಹೊರಕ್ಕೆ ಕಾಲಿಡುವಾಗ ಅವನು ಪುನಃ ಹೇಳಿದ.


"ಮೇಡಂ, ನಾನು ನಾಳೆಯೂ ಬರುತ್ತೇನೆ."

ಆಕೆ ಏನೂ ಹೇಳದೆ ಬಾಗಿಲಲ್ಲಿ ನಿಂತುಕೊಂಡಳು. ಅವನನ್ನು ತಿರುಗಿ ಕರೆದು ಮತ್ತೊಮ್ಮೆ ಎದೆಗೊತ್ತಿ ಆಲಿಂಗಿಸಿಕೊಳ್ಳಬೇಕೆಂಬ ಹಂಬಲವನ್ನು ತಡೆದುಕೊಂಡಳು. ಪಂಚೆಯನ್ನು ಮೇಲೆತ್ತಿ ಕಟ್ಟಿ ಮೆಟ್ಟಿಲಿಳಿದು ಹೊಲಗಳ ಬದಿಯಲ್ಲಿ ಮಸುಕು ಬೆಳಕಿನಲ್ಲೇ ನಡೆಯುತ್ತಾ ದೂರವಾಗುತ್ತಿದ್ದುದನ್ನು ಆಕೆ ನೋಡುತ್ತಾ ನಿಂತಿದ್ದಳು. ಬಳಿಕ ಅವನು ಕಣ್ಣಿನಿಂದ ಮರೆಯಾದಾಗ ಬಂದು ಮಂಚದಲ್ಲಿ ಬಿದ್ದುಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದಳು. ಆಕೆ ಆ ರಾತ್ರಿ ಉಣಲಿಲ್ಲ. ನಿದ್ರಿಸಲೂ ಇಲ್ಲ.

ಎರಡು ಗಂಟೆಯಾದಾಗ ಅವಳು ಎದ್ದಳು. ಅಡುಗೆ ಕೋಣೆಗೆ ಹೋಗಿ ಶುಚಿ ಮಾಡತೊಡಗಿದಳು. ಪಾತ್ರೆ ಉಳಿದ್ದ ಅನ್ನ ಹಾಗೂ ಸಾರನ್ನು ಕಾಗದವೊಂದರಲ್ಲಿ

NEXT PAGE

ಸುರಿದು ಹೊರಜಗಲಿಯಲ್ಲಿ ತಂದಿರಿಸಿದಳು. ಯಾವುದೋ ನಾಯಿಗಳು ತಿಂದುಹೋದವು. ಪಾತ್ರೆಗಳನ್ನೆಲ್ಲಾ ತೊಳೆದು ಕವುಚಿದಳು. ಮಲಗುವ ಕೋಣೆಗೆ ಬಂದು ಚಿಕ್ಕದೊಂದು ಸೂಟ್‌ಕೇಸ್ ಹೊರತೆಗೆದಳು. ಅತ್ಯಗತ್ಯಕ್ಕೆ ಬೇಕಾದ ವಸ್ತ್ರಗಳನ್ನು ಮಾತ್ರ ತೆಗೆದಿಟ್ಟುಕೊಂಡಳು. ಎರಡು ಕಾಗದಗಳು ಬರೆಯುವುದಕ್ಕಿವೆ. ಅವನ್ನು ಬರೆದುಬಿಟ್ಟರೆ ತಾನು ಹೊರಡಬಹುದು. ಇಬ್ಬರು ವ್ಯಕ್ತಿಗಳಿಗಷ್ಟೇ ಅವಳ ಬದುಕಿನಲ್ಲಿ ಸ್ಥಾನವಿರುವುದು. ಆ ಪತ್ರಗಳನ್ನೂ ಬರೆದಳು. ಗಂಡನಿಗೆ ಬರೆದ ಪತ್ರವನ್ನು ಮೇಜಿನ ಮೇಲಿರಿಸಿದಳು. ಜಯನಿಗೆ ಬರೆದುದನ್ನು ಹೊರಚಾವಡಿಯ ಹಂಚಿನ ಎರಡನೆಯ ಸಾಲಿನ ಕಿಂಡಿಯಲ್ಲಿರಿಸಿದಳು. ಬಾಗಿಲಿಗೆ ಬೀಗ ಜಡಿದಿದ್ದರೆ ಮೇಡಂನ ಚೀಟಿಗಾಗಿ ಹುಡುಕಬೇಕಾದುದೆಲ್ಲೆಂದು ಜಯನಿಗೆ ಗೊತ್ತು. ಗಂಡನಿಗೊಂದು ಪತ್ರವನ್ನು ಅವನು ಕೆಲಸ ಮಾಡುವ ಶಾಲೆಯ ವಿಳಾಸಕ್ಕೆ ಕಳುಹಿಸಲೂಬಹುದು. ಆತ ಇಲ್ಲಿಗೆ ಬಂದು ಬೀಗ ಜಡಿದ ಬಾಗಿಲನ್ನು ನೋಡಿ ದಂಗಾಗಬೇಕಾಗಿಲ್ಲ.




ಸೂಟ್‌ಕೇಸನ್ನು ಹಿಡಿದುಕೊಂಡು ಗ್ರೇಸಿ ಮೇಡಂ ಹೊರಗೆ ಕಾಲಿಟ್ಟರು: ಸಮಯ ಐದುಗಂಟೆ. ಐದೂವರೆ ಗಂಟೆಗೆ ರೈಲ್ವೇ ಸ್ಟೇಷನಿಗೆ ಹೋಗುವ ಮೊದಲ ಬಸ್ಸು.

ದೋಣಿಯಿಂದಿಳಿದು ಜಯ ಸುತ್ತಲೂ ನೋಡಿದ. ಬಿಳಿಯ ಮರಳು, ತೆಂಗಿನ ತೋಪುಗಳು, ಚಿಕ್ಕ ಮನೆಗಳು, ತನ್ನ ಆರು ವರ್ಷಗಳ ಹುಡುಕಾಟ ಇಲ್ಲಿಗೆ ಕೊನೆಯಾಗುತ್ತದೆಂದು ಎಣಿಸಿಕೊಂಡಾಗ ಜಯನ ಹೃದಯ ಬಡಿದುಕೊಂಡಿತು. ದೋಣಿಯಲ್ಲಿ ಜತೆಗಿದ್ದ ಬೆಳ್ಳಗಿನ ಸಮವಸ್ತ್ರ ಧರಿಸಿದ್ದ ಹೆಣ್ಣು ಮಕ್ಕಳೆಲ್ಲ ಇಳಿದಿದ್ದರು. ಅವರಲ್ಲಿ ಒಬ್ಬ ಹುಡುಗಿಯನ್ನು ಆತ ಕೇಳಿದ,

"ಶಾಲೆ ಇರುವುದೆಲ್ಲಿ ?"

"ಅದೋ ಅಲ್ಲಿ." ಅವಳು ಬೆರಳು ತೋರಿದಳು. ಆಕೆ ಬೆರಳು ತೋರಿದ ಆ ಚಿಕ್ಕ ಕಟ್ಟಡಗಳ ಕಡೆಗೆ ಆತ ನೋಡಿದ. ಯಾವುದು ಶಾಲೆಯೆಂದು ಆತನಿಗೆ ಗೊತ್ತಾಗಲಿಲ್ಲ.

"ಬನ್ನಿ. ನಮ್ಮ ಜತೆ ಬಂದರೆ ಸಾಕು." ಆಕೆ ಹೇಳಿದಳು. "ಯಾರನ್ನು ಕಾಣಬೇಕಾಗಿದೆ."

ಗ್ರೇಸಿ ಮೇಡಂ. ಆತ ತಟ್ಟನೆ ಹೇಳಿದ. ಕೂಡಲೇ ತಿಳಿಯಿತು. ಅವರು ಆ ಹೆಸರಿನಿಂದ ಮಕ್ಕಳಿಗೆ ತಿಳಿದಿರಲಾರರೆಂದು. ಆತ ತಿದ್ದಿಕೊಂಡ.

ಸಿಸ್ಟರ್ ಪೋಳಿನ್.

ಶಾಲೆಯ ಕಟ್ಟಡ ಚಿಕ್ಕದು. "ಸೈಂಟ್ ಮೇರೀಸ್ ಲೋವರ್ ಪ್ರೈಮರಿ ಸ್ಕೂಲ್" ಎಂಬುದಾಗಿ ಬೋರ್ಡ್ ಬರೆಯಲಾಗಿತ್ತು.

ಇಲ್ಲಿ ನಿಲ್ಲಿ. ಆ ಹುಡುಗಿ ಹೇಳಿದಳು. ನಾನು ಕರೆದುಕೊಂಡು ಬರುತ್ತೇನೆ.

ಆಕೆ ಹೋದಳು. ಒಂದು ಕೋಣೆಯೊಳಕ್ಕೆ ಹೋಗಿ ಕೂಡಲೇ ಹೊರಬಂದಳು. ಜೊತೆಯಲ್ಲಿ ಸನ್ಯಾಸಿನಿಗಳ ಪವಿತ್ರ ವಸ್ತ್ರ ಧರಿಸಿದ ಹೆಂಗಸೂ ಇದ್ದಳು. ಆತ ತಟ್ಟನೆ ಅವರ ಗುರುತು ಹಿಡಿದ. ಆಕೆಯೂ ಸಹ. ಮುಖದಲ್ಲುಂಟಾದ ಭಾವನೆಗಳನ್ನು ನಿಯಂತ್ರಿಸಿಕೊಂಡು ಅವರು ಜಯನ ಹತ್ತಿರಕ್ಕೆ ಬಂದರು.

ಯಾರು, ಜಯನೋ ?

ಬಳಿಕ ಪಕ್ಕಕ್ಕೆ ತಿರುಗಿ ಪ್ರಶ್ನಾರ್ಥಕವಾಗಿ ನೋಡುತ್ತಿದ್ದ ಹುಡುಗಿಗೆ ಆಕೆ ಹೇಳಿದರು, "ಮಗಳೆ, ಇದು ನನ್ನ ತಮ್ಮ. ನೀನಿನ್ನು ಹೋಗು."

ನಾನು ಮದರ್ ಸುಪೀರಿಯರ್ ಅವರ ಅನುಮತಿ ಕೇಳಿ ಬರುತ್ತೇನೆ. ಅವರು ಹೆಡ್ ಮಿಸ್ಟ್ರೆಸ್.

ಗ್ರೇಸಿ ಮೇಡಂ ನಡೆದು ಹೋಗುತ್ತಿರುವುದನ್ನು, ವರಾಂಡದ ಕೊನೆಯ ಕೋಣೆಗೆ ಹೋಗುವುದನ್ನು, ಎರಡು ನಿಮಿಷಗಳಲ್ಲಿ ಮರಳಿ ಬರುವುದನ್ನು ಜಯ ಕಂಡ. ಗ್ರೇಸಿ ಮೇಡಂ ಜಗಲಿಯ ಅರ್ಧಭಾಗಕ್ಕೆ ಬಂದಾಗ ಹೆಡ್‌ಮಿಸ್ಟ್ರೆಸ್‌ನ ಕೋಣೆಯಿಂದ ಒಬ್ಬಾಕೆ ದಪ್ಪಗಿದ್ದ ಸನ್ಯಾಸಿನಿ ಹೊರಬಂದು ಕನ್ನಡಕದೊಳಗಿನಿಂದ ತನ್ನನ್ನು ಗೌರವಪೂರ್ಣವಾಗಿ ನೋಡುತ್ತಿರುವುದನ್ನು ಅವನು ಕಂಡ. ಬಾ. ನಾವು ಕ್ವಾರ್ಟರ್ಸ್‌ಗೆ ಹೋಗೋಣ.

ಅವರು ಅಂಗಳಕ್ಕಿಳಿದು ನಡೆದರು. ಬ್ರೀಫ್‌ಕೇಸ್ ಹಿಡಿದುಕೊಂಡ ಜಯನೂ ಜತೆಗೆ ನಡೆದ.

ಕ್ವಾರ್ಟರ್ಸ್ ಸ್ವಲ್ಪ ದೂರದಲ್ಲಿದೆ. ಐದು ನಿಮಿಷದ ದಾರಿ. ಹಂಚು ಹೊದಿಸಿದ ಚಿಕ್ಕದೊಂದು ಮನೆ. ಪವಿತ್ರ ವಸ್ತ್ರದಲ್ಲಿ ತೂಗಾಡಿಸಿದ್ದ ಕೀ ಗೊಂಚಲಿನಿಂದ ತೆಗೆದ ಕೀಯೊಂದರಿಂದ ಆಕೆ ಬೀಗ ತೆರೆದಳು. ಚಿಕ್ಕದೊಂದು ಕೋಣೆ. ಗೋಡೆಗೆ ತಾಗಿಸಿ ಇರಿಸಿದ್ದ ಒಂದು ಮೇಜು. ಮೂರು ಕಡೆಗಳಲ್ಲಿ ಮೂರು ಕುರ್ಚಿಗಳು. ನೀಲಿಯ ಮೇಲು ಹೊದಿಕೆ. ನಾಲ್ಕೈದು ಪುಸ್ತಕಗಳು. ಒಂದೆಡೆ ಗೋಡೆಯ ಮೇಲೆ ಮುಳ್ಳುಗಳು ಚುಚ್ಚಿ ನೆತ್ತರು ಸುರಿಯುತ್ತಿರುವ ಹೃದಯವನ್ನು ತೆರೆದು ತೋರುತ್ತಿರುವ ಕ್ರಿಸ್ತದೇವನ ಚಿತ್ರ. ಪಕ್ಕದಲ್ಲಿ ಮಲಗುವ ಕೋಣೆ. ಅಲ್ಲಿ ಎರಡು ಕಡೆಗಳಲ್ಲಿ ಬಿಳಿಯ ಮೇಲು ಹೊದಿಕೆ ಹಾಸಿದ ಚಿಕ್ಕ ಮಂಚಗಳು.

ನಾನು ಚಹಾ ಮಾಡುತ್ತೇನೆ.

ಗ್ರೇಸಿ ಮೇಡಂ ಅಡುಗೆ ಕೋಣೆಗೆ ಹೋದರು. ಏನೂ ಹೇಳದೆ ಜಯ ಅವರನ್ನು ಗಮನಿಸುತ್ತಿದ್ದ. ಗ್ರೇಸಿ ಮೇಡಂನಲ್ಲಿ ಏನೂ ಬದಲಾವಣೆಯಾಗಿಲ್ಲ. ಬೆಳ್ಳಗಿನ ಸುಂದರವಾದ ಮುಖ. ದುಂಡಗಿನ ಕೈಗಳು. ಸನ್ಯಾಸಿನಿಯರ ಉಡುಗೆ ಅವರಿಗೆ ತೀರಾ ಹೊಂದುತ್ತಿರಲಿಲ್ಲ. ಬಹುಶಃ ನಾನವರನ್ನು ಬೇರೆಯ ಉಡುಗೆಯಲ್ಲಿ ಕಂಡದ್ದರಿಂದಾಗಿರಬಹುದು. ಅವರನ್ನು ಬಣ್ಣದ ಹೂಗಳುಳ್ಳ ಸೀರೆಯಲ್ಲಿ ಜಯ ಕಲ್ಪಿಸಿಕೊಂಡ. ಅವರು ಅತೀವ ಸುಂದರಿಯಾಗಿದ್ದರು.

ಮೇಜಿನ ಆ ಕಡೆ, ಈ ಕಡೆ ಕುಳಿತು ಚಹಾ ಕುಡಿಯುತ್ತಿದ್ದಾಗ ಮೇಡಂ ಕೇಳಿದರು,

"ನೀನು ಬಂದದ್ದೇಕೆ?"

ಮೇಡಂನನ್ನು ಕಾಣುವುದಕ್ಕೆ. ಕರೆದುಕೊಂಡು ಹೋಗುವುದಕ್ಕೆ. ಅವರು ನಕ್ಕರು. "ನೀನು ನಿನ್ನ ಹುಚ್ಚುತನವನ್ನು ಇನ್ನೂ ಮರೆತಿಲ್ಲವೆ?"

ಜಯ ನಗಲಿಲ್ಲ. ಅವನಿಗೆ ಬಹಳಷ್ಟು ಹೇಳುವುದಕ್ಕಿದೆ. ಮೇಡಂ ನನ್ನಿಂದ ಓಡಿ ಹೋದುದೇಕೆಂದು... ಸಂಜೆಯ ಹೊತ್ತು ಎಂದಿನಂತೆ ಪುಸ್ತಕ ಹಿಡಿದು ಅವರ ಮನೆಗೆ ಟ್ಯೂಷನಿಗಾಗಿ ಬಂದಾಗ ಬೀಗ ಹಾಕಿದ್ದನ್ನು ಕಂಡು ಮೇಡಂ ಹೊರಗೆಲ್ಲಾದರೂ ಹೋಗಿದ್ದಿರಬಹುದು; ಅಲ್ಲದೇ ಹೋದರೆ ಆಕಸ್ಮಿಕವಾಗಿ ಗಂಡನ ಬಳಿಗೆ, ತನಗೆ ತಿಳಿಸದೆ ಹೋಗಬೇಕಾಗಿ ಬಂದದ್ದಾಗಿರಬಹುದು ಎಂದೇ ಎಣಿಸಿಕೊಂಡಿದ್ದ. ಅಂತಹ ಸಂದರ್ಭಗಳಲ್ಲಿ ಆಕೆ ತನಗಾಗಿ ಸೂಚನೆ ಬರೆದಿಡುತ್ತಿದ್ದ ಜಾಗದಲ್ಲಿ ನೋಡಿದಾಗ ಕಂಡುಬಂದ ಪತ್ರ ತನ್ನ ಮನಸ್ಸನ್ನು ಕಲಕಿತ್ತು.

ಜಯ, ನೀನು ಮತ್ತೆ ಬರುವೆಯೆಂದು ನನಗೆ ಗೊತ್ತು. ಆದರಿಂದಾಗಿ ನಾನು ಹೋಗುತ್ತಿದ್ದೇನೆ. ನನಗೆ ನೀನು ನಾಶವಾಗಬಾರದು ಎಂದಿದೆ. ನನ್ನನ್ನು ಹುಡುಕ ಕೂಡದು. ನಾನು ಜೋಸ್‌ನನ್ನು ತೊರೆಯುತ್ತಿದ್ದೇನೆ. ಅವನಿಗೂ ಬರೆದಿದ್ದೇನೆ. ನೀನು ಓದಿ ಜಾಣನಾಗಬೇಕು. ಮೇಡಂನ ನೆನಪಿದ್ದರೆ ಅದೇ ಸಾಕು.

ನಿನ್ನ,
ಗ್ರೇಸಿ ಮೇಡಂ

ಜಯ ನನ್ನನ್ನೆಲ್ಲ ಮರೆತಿರಬಹುದೆಂದು ನಾನು ಎಣಿಸಿದ್ದೆ.

ನಾನು ಇಂಜಿನಿಯರಿಂಗ್ ಪಾಸಾದೆ. ಅವನು ಹೇಳಿದ,

"ಹೌದೆ! ಒಳ್ಳೆಯದಾಯಿತು. ಆಕೆ ತುಂಬ ಸಂತೋಷದಿಂದ ಹೇಳಿದರು. ಇನ್ನು ಒಂದು ಉದ್ಯೋಗ ದೊರಕಿಸಿಕೊಳ್ಳುವುದಕ್ಕೆ ಪ್ರಯತ್ನಿಸು. ಆಮೇಲೆ ಒಳ್ಳೆಯ ಹುಡುಗಿಯೊಬ್ಬಳನ್ನು ಮದುವೆಯಾಗಿ ಸುಖವಾಗಿ ಬಾಳು.

ಮೇಡಂ, ನನಗೆ ರ್‍ಯಾಂಕ್ ಬಂದಿದೆ. ಪ್ರಾಂತ್ಯದಲ್ಲಿ ಹನ್ನೆರಡನೆಯ ರ್‍ಯಾಂಕ್. ನನಗೆ ಉದ್ಯೋಗ ಸಿಕ್ಕಿದ್ದಾಗಿದೆ. ರ್‍ಯಾಂಕ್ ಪಡೆದವರನ್ನು ದೊಡ್ಡ ಕಂಪೆನಿಯವರು ಹುಡುಕಿ ಉದ್ಯೋಗ ಕೊಡಿಸುತ್ತಾರೆ. ಆರು ತಿಂಗಳಿನ ಟ್ರೈನಿಂಗ್ ವೇಳೆ ಅಧಿಕವೇತನ ಬರುವುದಿಲ್ಲ. ಅದು ಕಳೆದ ಬಳಿಕ ಒಳ್ಳೆಯ ಸಂಬಳ. ಕ್ವಾರ್ಟರ್ಸ್ ಸಿಗುತ್ತದೆ. ಮೇಡಂ ನನ್ನ ಜೊತೆಗೆ ಬನ್ನಿ. ನಾವು ಮದುವೆಯಾಗಿ ಸುಖವಾಗಿ ಇದ್ದುಬಿಡೋಣ."

ಮೇಡಂ ನಂಬಲಾಗದವರಂತೆ ಜಯನನ್ನು ನೋಡಿದರು. ಮುಗ್ಧವಾದ ಮುಖದ ಮೇಲಿದ್ದ ಮೀಸೆ ಮತ್ತಷ್ಟು ಕಪ್ಪಾಗಿತ್ತು. ಸ್ವರವೂ ಹೆಚ್ಚು ಗಡಸಾಗಿತ್ತು. ದೇಹವು ಮತ್ತೂ ಸ್ವಲ್ಪ ದುಂಡಗಾಗಿತ್ತು.

ಜಯ, ನಿನಗೆ ಗೊತ್ತೆ ನನಗೆಷ್ಟು ಸಂತೋಷವಾಗಿದೆಯೆಂದು. ಪ್ರೀತಿಗೊಳಗಾಗುವುದು ಪ್ರತಿಯೊಬ್ಬರ ಅಗತ್ಯವಾಗಿದೆ. ಆದರೆ ನಾನಿಂದು ಸ್ವತಂತ್ರಳಲ್ಲ. ಎಲ್ಲವನ್ನು ಸೃಷ್ಟಿಕರ್ತನಿಗೆ ಅರ್ಪಿಸಿದ್ದೇನೆ. ಅದರಲ್ಲಿಯೇ ನಾನು ಸುಖವನ್ನು ಕಂಡುಕೊಳ್ಳುತ್ತಿದ್ದೇನೆ. ಬೇರೆ ಮನೋವಿಕಾರಗಳು ನನ್ನನ್ನು ಸ್ಪರ್ಶಿಸುವುದೇ ಇಲ್ಲ.

ಮೇಡಂ ಈ ಬಟ್ಟೆಗಳು ನಿಮಗೆ ತೀರಾ ಹಿಡಿಸುವುದಿಲ್ಲ. ಅದೆಲ್ಲವನ್ನು ಬಿಚ್ಚಿ ಎಸೆಯಿರಿ. ಹಿಂದೆ ತೊಟ್ಟುಕೊಳ್ಳುತ್ತಿದ್ದ ಹಾಗೆ ಚಂದದ ಬಟ್ಟೆಗಳನ್ನು ತೊಟ್ಟುಕೊಳ್ಳಿ. ನಾನು ಹಣ ತಂದಿದ್ದೇನೆ. ಪೇಟೆಗೆ ಹೋಗಿ ಒಳ್ಳೆಯ ಬಟ್ಟೆಗಳನ್ನು ಕೊಂಡುಕೊಳ್ಳೋಣ.

ಗ್ರೇಸಿ ಮೇಡಂ ಏನನ್ನೂ ಹೇಳದೆ ಕಣ್ಣು ಮುಚ್ಚಿದರು. ಕಡಲ ಗಾಳಿ ಕಿಟಿಕಿಯಿಂದ ನುಸುಳಿ ಅವರ ಬಟ್ಟೆಗಳನ್ನು ಹಾರಿಸುತ್ತಿತ್ತು. ಶಾಂತವಾಗಿದ್ದ ಅವರ ಮುಖದಲ್ಲಿ ಕ್ಷೋಭೆಯ ಛಿರಿಳಿತವನ್ನು ಜಯ ಗಮನಿಸಿದ. ನಿಮಿಷಗಳ ಬಳಿಕ ತೆರೆದ ಅವರ ಕಣ್ಣುಗಳು ತುಂಬಿದ್ದುವು. ಅವರು ಜಯನನ್ನು ನೋಡಿ ಮುಗುಳ್ನಕ್ಕರು.



NEXT PAGE

ಜಯ, ನಾನು ಇಬ್ಬರನ್ನು ಅಧಿಕವಾಗಿ ಪ್ರೀತಿಸಿದೆ. ಅವರು ನಾಶವಾಗದಿರಲೆಂದು ನಾನು ಓಡಿಹೋದೆ. ನಾನು ತಾಯಿಯಾಗಲಾರೆ ಎಂದು ತಿಳಿದಿದ್ದರೂ ಜೋಸ್ ನನ್ನನ್ನು ಅತಿಯಾಗಿ ಪ್ರೀತಿಸಿದ. ನಾನು ದೂರ ಉಳಿದರೆ ಪ್ರಾಯಶಃ ಅವನು ಬೇರೆ ಮದುವೆಯಾದಾನು. ಮಕ್ಕಳೂ ಆದಾವು. ಆ ಎರಡನೆಯ ವ್ಯಕ್ತಿ ಯಾರು ಎಂದು ನಿನಗೆ ಗೊತ್ತಲ್ಲ. ನಿನ್ನ ಪ್ರೀತಿ ತೀವ್ರವಾಗುತ್ತದೆಂದು ತಿಳಿದಾಗ ನಾನದನ್ನು ತಡೆಯಲು ಶ್ರಮಿಸಿದೆ. ಸಾಧ್ಯವಾಗಲಿಲ್ಲ. ಉಳಿದ ದಾರಿಯೆಂದರೆ ನಾನು ಅಲ್ಲಿಂದ ಮರೆಯಾಗುವುದು ಮಾತ್ರವಾಗಿತ್ತು. ನೀನು ಹಠ ಹಿಡಿಯುವೆಯಾದರೆ ಇಲ್ಲಿಂದಲೂ ಹೋಗಿ ಬಿಡುತ್ತೇನೆ.

ಜಯ ಎದ್ದು ಹೊರಗೆ ಹೋದ. ಸ್ವಲ್ಪ ದೂರದಲ್ಲಿ ತೆಂಗಿನ ಸೋಗೆಗಳೆಡೆಯಿಂದ ಕಡಲಿನ ತೆರೆಗಳು ಕಾಣಿಸುತ್ತಿವೆ. ಕಡಲ ತೀರಕ್ಕೆ ಆತ ನಡೆದ. ತಣ್ಣಗಿನ ಕಡಲ ಗಾಳಿ ಅವನಿಗೆ ಮನೆಯೊಳಗೆ ದೊರೆಯದ ಸಾಂತ್ವನ ನೀಡಿತು.

ಗ್ರೇಸಿ ಮೇಡಂ ಅಡುಗೆ ಕೋಣೆ ಸೇರಿದರು. ಜಯನಿಗೆ ಇಷ್ಟವಾದ ಆಹಾರ ವಸ್ತುಗಳ್ಯಾವುವೆಂದು ಅವರಿಗೆ ಗೊತ್ತು. ಶಾಲೆಯಿಂದ ಹಸಿದು ಬರುವ ಮಗನಿಗೆ ಅವನಿಗಿಷ್ಟವಾದ ತಿಂಡಿ ತಯಾರಿಸುವ ತಾಯಿಯ ಮನೋಭಾವದಿಂದ ಅವರು ಅನ್ನ ಪದಾರ್ಥಗಳನ್ನು ತಯಾರಿಸಿದರು.

ಊಟ ಮಾಡುತ್ತಿದ್ದಾಗ ಗ್ರೇಸಿ ಮೇಡಂ ಹೇಳಿದರು,

"ಇದೊಂದು ಪುಟ್ಟ ದ್ವೀಪ. ನಾಲ್ಕು ಸುತ್ತಿನಲ್ಲಿಯೂ ನೀರು. ಹೊರಗೆ ಹೋಗಬೇಕಾದರೆ ಕಡವು ದಾಟಬೇಕು. ನಾನು ಕೆಲವೊಮ್ಮೆ ಆಲೋಚಿಸುವುದುಂಟು..."

ಆಕೆ ನಿಲ್ಲಿಸಿದಳು. ಅಲ್ಲವಾದರೆ ಇದರಲ್ಲೆಲ್ಲ ಏನಿದೆ ಎಂಬ ಭಾವದಿಂದ ತಲೆಯಾಡಿಸಿದರು.

"ನಿನಗೆ ಸ್ವಲ್ಪ ಹರಿವೆ ಪಲ್ಯ ಹಾಕಲೆ?"

"ಹಾಕಿ."

ಅವನು ಕೇಳಿದ, "ಏನದು ಆಲೋಚಿಸುವುದಿದೆಯೆಂದು ಹೇಳಿದಿರಲ್ಲ."

"ಏನೂ ಇಲ್ಲ. ಅವರು ಹೇಳಿದರು. ನಾನೀ ದ್ವೀಪದ ಕುರಿತು ಹೇಳುತ್ತಿದ್ದೆ. ಇಲ್ಲಿಗೆ ಬರುವಾಗ ಹಣ ಒಂದು ಭಾಗಕ್ಕೆ ಮಾತ್ರ ಕೊಡಬೇಕಾಗಿದೆ ಅಷ್ಟೆ. ತಿರುಗಿ ಹೋಗುವಾಗ ಕೊಡಬೇಕಾಗಿಲ್ಲ. ಹಾಗೆ ನಾನು ಯಾವಾಗ ಬೇಕಿದ್ದರೂ ಹೊರಗೆ ಹೋಗಬಹುದು. ಯಾವ ತೊಂದರೆಯೂ "ಇಲ್ಲದೆ ಬಂದದ್ದು. ಹಾಗೆಯೇ ತಿರುಗಿಯೂ ಹೋಗಬಹುದು."

ಊಟವಾದ ಬಳಿಕ ಅವರು ವಿಶ್ರಮಿಸತೊಡಗಿದರು. ಎರಡು ಮಂಚಗಳಲ್ಲಿ ಎದಿರು ಬದಿರಾಗಿ ಮಲಗಿಕೊಂಡು ಮಾತನಾಡಿದರು.

"ಮೇಡಂ ಹೋದ ಬಳಿಕ ನನಗೆ ಅತೀವ ಸಂಕಟವಾಯಿತು. ಜಯ ಹೇಳಿದ. ನಾನು ತುಂಬ ಹೊತ್ತು ಅತ್ತುಬಿಟ್ಟೆ. ಆಮೇಲೆ ಒಂದು ತೀರ್ಮಾನಕ್ಕೆ ಬಂದೆ. ಮೇಡಂ ಎಲ್ಲಿಯಾದರೂ ಇದ್ದಾರೆ ಎಂದು ಗೊತ್ತಿತ್ತು. ನಾನು ಓದಿ ಉತ್ತಮ ಅಂಕಗಳನ್ನು ಪಡೆದು ಡಿಗ್ರಿ ಸಂಪಾದಿಸುತ್ತೇನೆ. ಆಮೇಲೆ ಒಂದು ಒಳ್ಳೆಯ ಉದ್ಯೋಗ ಸಿಕ್ಕಿದರೆ ಮೇಡಂನ್ನು ಹುಡುಕಿ ಮದುವೆಯಾಗುತ್ತೇನೆ. ಆ ಸಮಾಧಾನದಿಂದಲೇ ನಾನು ಈವರೆಗೆ ಬದುಕಿದುದು."

"ಇಲ್ಲಿ ನಮ್ಮ ಮಠ ಚಿಕ್ಕದು. ಮೇಡಂ ಹೇಳಿದರು, ಮಠವೆಂದು ಹೇಳಬೇಕಾಗಿಲ್ಲ. ನಾವಿರುವುದು ನಾಲ್ಕು ಮಂದಿ. ಮದರ್ ಸುಪೀರಿಯರ್ ಮತ್ತು ನಾವು ಮೂವರು ಸಿಸ್ಟರ್‌ಗಳು ಅಷ್ಟೆ. ನಿಜಕ್ಕೂ ಈ ಶಾಲೆಯನ್ನು ನಡೆಸುವುದಕ್ಕಾಗಿಯೇ ನಾವಿಲ್ಲಿರುವುದು. ನಾವು ನಾಲ್ಕು ಮಂದಿಯೂ ಪಾಠ ಹೇಳುತ್ತೇವೆ. ಉಳಿದ ಅಧ್ಯಾಪಿಕೆಯರು ಪೇಟೆಯಿಂದ ಕಡವು ದಾಟಿ ಬರುತ್ತಾರೆ. ಇಲ್ಲಿ ಒಂದು ಚಿಕ್ಕ ಅನಾಥಾಲಯವನ್ನು ನಡೆಸುತ್ತಿದ್ದೇವೆ. ಹನ್ನೆರಡು ಮಂದಿ ಮಕ್ಕಳಿದ್ದಾರೆ. ನಾವು ಅವರಿಗೆಲ್ಲ ತಾಯಂದಿರ ಹಾಗೆ. ಮತ್ತೆ ಒಳ್ಳೆಯದಾದ ಕಡಲ ಗಾಳಿ. ಮನಸ್ಸಿಗೆ ಯಾವುದೇ ಪರಿಮಿತವಿಲ್ಲದ ಜೀವನ. ಇದೇ ಅಲ್ಲವೇ ನಮಗೆ ಬೇಕಾದದ್ದು!

"ಬೇಗನೆ ಈ ದ್ವೀಪದಲ್ಲಿ ಒಂದು ಇಗರ್ಜಿಯಾಗುತ್ತದೆ. ಆಗ ನಮ್ಮ ಜವಾಬ್ದಾರಿಯೂ ಹೆಚ್ಚಾಗುತ್ತದೆ. ಮತ್ತೆ ಬೇರಾವುದರ ಕುರಿತೂ ಆಲೋಚಿಸುವುದಕ್ಕೆ ಸಮಯ ಇರಲಾರದು."

ಮೇಡಂ, ಯಜಮಾನರು ಏನು ಮಾಡುತ್ತಿದ್ದಾರೆ?

"ಅವರು ನನ್ನನ್ನು ಹುಡುಕುತ್ತಾ ಬಂದಿದ್ದರು. ನಾನು ಮರಳಿ ಬರುವುದಿಲ್ಲ ಎಂದೆ. ಬೇರೆ ಮದುವೆ ಮಾಡಿಕೊಳ್ಳುವಂತೆಯೂ ಒತ್ತಾಯಿಸಿದೆ. ಮದುವೆಗೆ ಮೊದಲು ಮತ್ತೆ ಬಂದಿದ್ದರು. ಇನ್ನು ಬರಬೇಡಿ ಎಂತಲೂ ಹೇಳಿದೆ. ಅವರು ಸುಖವಾಗಿ ಬದುಕಲಿ."

ನಾನು ಮೇಡಂನ ಹತ್ತಿರ ಬಂದು ಮಲಗಿಕೊಳ್ಳಲೇ?" ಜಯ ಇದ್ದಕ್ಕಿದ್ದ ಹಾಗೆ ಕೇಳಿದ.

ಮಲಕ್ಕೊ. ಆಕೆ ವಾತ್ಸಲ್ಯದಿಂದ ಹೇಳಿದರು. ಹಾಸಿಗೆಯಲ್ಲಿ ಪಕ್ಕಕ್ಕೆ ಸರಿದು ಮಲಗಿಕೊಂಡರು. ಒಳ್ಳೆಯ ಹುಡುಗನಾಗಿ ವರ್ತಿಸಬೇಕು ಅಷ್ಟೆ.

ಜಯ ಮೇಡಂನ ಜೊತೆ ಹಾಸಿಗೆಯಲ್ಲಿ ಮಲಗಿದ. ಹಾಸಿಗೆ ಚಿಕ್ಕದಾಗಿತ್ತು. ಅವರು ಬಹಳ ಹತ್ತಿರ. ಮುಖದ ಹತ್ತಿರ ಮುಖ ಇಟ್ಟು ಮಲಗಿದರು. ಅವರ ನಿರ್ಲಿಪ್ತತೆ ಆತನಿಗೆ ಅಚ್ಚರಿ ತಂದಿತ್ತು. ಅವರು ತನಗೆ ವಶವಾಗುವ ಪ್ರಯತ್ನ ಎಂದು ಸಂಶಯ ಪಟ್ಟ. ಅವನ ಹೃದಯ ಬಡಿತ ಬಲವಾಯಿತು. ಆತ ಅವರೆದೆಯ ಮೇಲೆ ಕೈಯಿರಿಸಿದ.

ಜಯನ ಕೈಯನ್ನು ಮೆಲ್ಲನೆ ಸರಿಸಿ ತೆಗೆದು ಅವರು ಹೇಳಿದರು, 'ತುಂಟ, ನಾನು ಹೇಳಲಿಲ್ಲವೆ ಒಳ್ಳೆಯ ಹುಡುಗನಾಗಬೇಕು ಎಂದು."

ತತ್‌ಕ್ಷಣ ಕಳೆದು ಹೋದದ್ದನ್ನೆಲ್ಲ ನೆನೆದು ಅವನು ಅಳತೊಡಗಿದ. ಒಂದು ನಿಮಿಷ ಅವರು ಅಪ್ರತಿಭರಾದರು. ಆಮೇಲೆ ಮೆಲ್ಲನೆ ಅವನನ್ನು ಸಮಾಧಾನಪಡಿಸತೊಡಗಿದರು.

"ನಿನಗೆ ಇಪ್ಪತ್ನಾಲ್ಕು ವರ್ಷಗಳಾದುವಷ್ಟೆ. ನೀನು ಈಗಲೂ ಒಂದು ಮಗು. ನನಗೆ ಮೂವತ್ತೆರಡು ಕಳೆಯಿತು. ನೀನು ನನ್ನನ್ನು ಅಕ್ಕ ಎಂದು ಕರೆ."

NEXT PAGE

ಜಯ ಅಳುವುದನ್ನು ನಿಲ್ಲಿಸಿರಲಿಲ್ಲ. ಅವರು ಅವನ ಸೊಂಟದ ಮೇಲೆ ಕೈಹಾಕಿ ಹತ್ತಿರಕ್ಕೆಳೆದುಕೊಂಡರು. ಹಣೆಯ ಮೇಲೆ ಚುಂಬಿಸಿದರು.

'ಜಯ' ಅವರು ಮೆಲ್ಲನೆ ಕರೆದರು. 'ನಾನು ಈಗಲೂ ನಿನ್ನನ್ನು ಪ್ರೀತಿಸುತ್ತೇನೆ. ಅಳಬೇಡ.'

ಆರು ವರ್ಷಗಳಿಗೆ ಹಿಂದೆ ವೃದ್ಧ ಪಾದ್ರಿಯ ಮುಂದೆ ತಾನು ಮಾಡಿದ ಪಾಪ ನಿವೇದನೆಯನ್ನು ಗ್ರೇಸಿ ಮೇಡಂ ನೆನಪಿಸಿಕೊಂಡರು. ಪಾದ್ರಿಯ ಮಾತುಗಳು ಅನುಕಂಪ ಪೂರ್ಣವಾಗಿದ್ದವು.

"ಮಗಳೇ, ನೀನು ಅಳಬೇಡ. ಈ ಪಾಪ ನಿವೇದನೆಯ ಮೂಲಕ ನೀನು ಮಾಡಿದ ಪಾಪವನ್ನು ಕಳೆದುಕೊಂಡಿರುವೆ. ತಂದೆಯ ಸೇವೆಗಾಗಿ ನಿನ್ನ ಜೀವನವನ್ನು ಸಮರ್ಪಿಸುವ ನಿನ್ನ ತೀರ್ಮಾನ ಉಚಿತವಾದದ್ದು. ನಿನ್ನನ್ನು ನಾನು ತಂದೆಯ ಮಗನ ಪರಿಶುದ್ಧವಾದ ಆತ್ಮದ..."

'ಮಲಗಿಕೋ' ಆಕೆ ಹೇಳಿದರು. 'ನಾನು ಐದು ಗಂಟೆಗೆ ಎಬ್ಬಿಸುತ್ತೇನೆ.'

ಒಂದು ಚಿಕ್ಕ ಮಗುವಿನಂತೆ ಜಯ ಮಲಗಿದ್ದುದನ್ನು ಸಿಸ್ಟರ್ ನೋಡುತ್ತಾ ಮಲಗಿದರು. ಗಂಟೆ ನಾಲ್ಕೂಮುಕ್ಕಾಲಾಯಿತು.

ಮೆಲ್ಲನೆ ಎದ್ದು ಅಡುಗೆ ಕೋಣೆಗೆ ಹೋಗಿ ಚಹಾ ತಯಾರಿಸಿದರು.

ಹೋಗುವುದಕ್ಕೆ ಮೊದಲು ಅವನನ್ನು ಮತ್ತೊಮ್ಮೆ ತನ್ನ ಬಳಿಗೆ ಸೆಳೆದುಕೊಂಡು ಹಣೆಯ ಮೇಲೆ ಮುದ್ದಿಸಿದರು. ಜಯ ಮೆಟ್ಟಲುಗಳನ್ನಿಳಿದ ಬಳಿಕ ತಿರುಗಿ ಕೋಣೆಗೆ ಬಂದರು. ಯೇಸುವಿನ ಚಿತ್ರದ ಎದುರು ಮೊಣಕಾಲೂರಿ ಕುಳಿತರು. ಪ್ರಲೋಭನೆಗಳಿಂದ ರಕ್ಷಿಸಿದುದಕ್ಕಾಗಿ ಅವರು ಕೃತಜ್ಞತೆಗಳನ್ನು ಹೇಳುತ್ತ ಪ್ರಾರ್ಥನೆಯಲ್ಲಿ ಮಗ್ನರಾದರು. ಧಾರೆಯಾಗಿ ಸುರಿದ ಕಣ್ಣೀರು ಅವರ ಎದೆಯನ್ನು ತೋಯಿಸಿತು.

ಭಾನುವಾರ ಅವರು ಪಾಪ ನಿವೇದನೆ ನಡೆಸಿದರು.

ಫಾದರ್, ಅವನು ಬಂದ.

ಬಂದು?

ಪಾದ್ರಿಯ ಧ್ವನಿಯಲ್ಲಿ ಉದ್ವೇಗವಿತ್ತು. ತೆರೆಯ ಹಿಂದಿರುವ ಪಾದ್ರಿಯ ರೂಪವನ್ನು ಕಲ್ಪಿಸಿಕೊಂಡರು. ಅವರ ಸುಕ್ಕುಗಟ್ಟತೊಡಗಿದ ಮುಖ ನೆನಪಿಗೆ ಬಂತು. ನೆರೆತ ಹುಬ್ಬು. ಕೃಶವಾದ ಕೈಗಳು.

'ನಾನು ಸೈತಾನನ ಪ್ರಲೋಭನೆಗಳಿಗೆ ಒಳಗಾಗದೆ ಅವನನ್ನು ಹಿಂದೆ ಕಳುಹಿಸಿದೆ.'

ತೆರೆಯ ಆಚೆಯಿಂದ ಒಂದು ನಿಟ್ಟುಸಿರು.

ಹೆಣ್ಣೇ, ಪಾದ್ರಿ ಹೇಳತೊಡಗಿದರು, 'ನೀನು ಮಾಡಿದುದು ಮಾನ್ಯವಾದದ್ದೆ. ಸೈತಾನನ ಪ್ರಲೋಭನೆಗಳಿಗೆ ತುತ್ತಾಗದ ನೀನು ಆದಿ ಮಾತೆಯಾದ ಈವ್‌ಳಿಗಿಂತಲೂ ಶ್ರೇಷ್ಠಳಾದೆ. ಮುಂದೆ ಕೂಡಾ ಈ ರೀತಿಯ ಪ್ರಲೋಭನೆಗಳಿಗೆ ಅವಕಾಶ ಕೊಡದೆ, ಸೈತಾನನೊಡನೆ ದಾಕ್ಷಿಣ್ಯ ತೋರದೆ ಜೀವನ ಸಂಗ್ರಾಮದಲ್ಲಿ ಯಶಸ್ವಿಯಾಗುವ ಸಾಮರ್ಥ್ಯ ನಿನಗುಂಟಾಗಲಿ. ನಾನು ಭಗವಂತನಾದ ಯೇಸುವಿನಲ್ಲಿ ಪ್ರಾರ್ಥಿಸುತ್ತೇನೆ. ಅವನು ಎಂದೂ ನಿನಗೆ ಆಧಾರವಾಗಿ ನಿಲ್ಲಲಿ.

ತತ್‌ಕ್ಷಣ ಸಿಸ್ಟರ್‌ಗೆ ಪಾದ್ರಿಯ ಮೇಲೆ ದ್ವೇಷ ಉಂಟಾಯಿತು. ಮಾತುಗಳು ಬಿದಿರಿನ ತುಂಡುಗಳಂತೆ ಪೊಳ್ಳು ಎಂದೂ ಅದು ಆತನ ಕರ್ತವ್ಯಗಳನ್ನು ಹಗುರಗೊಳಿಸಿತಲ್ಲದೆ ತನ್ನ ಆಂತರಿಕವಾದ ವೈಚಾರಿಕ ದ್ವಂದ್ವಗಳಿಗೆ ಪ್ರಯೋಜನವಾಗಲಿಲ್ಲ ಎಂದೂ ಆಕೆ ಕಂಡುಕೊಂಡರು.

ಆಕೆ ತಾನು ವಾಸಿಸುತ್ತಿರುವ ದ್ವೀಪವನ್ನು ಕುರಿತು ನೆನೆದರು. ಇಗರ್ಜಿ ಇರುವುದು ಬೇರೊಂದು ದ್ವೀಪದಲ್ಲಾಗಿತ್ತು. ಇನ್ನಷ್ಟು ಸ್ವಲ್ಪ ದೊಡ್ಡ ದ್ವೀಪದಲ್ಲಿ. ಇಲ್ಲಿ ಇರುವುದಕ್ಕೆ ಆರಂಭಿಸಿದ ಮೇಲೆ ಅವರು ಹೊರ ಹೋದದ್ದೆಂದರೆ ಈ ಎರಡು ದ್ವೀಪಗಳ ನಡುವೆ ಮಾತ್ರ. ಅಲ್ಲಿಂದ ನೋಡುವಾಗ ಆ ತೀರ ಕರೆಯುತ್ತಿರುವಂತೆ ತೋರುತ್ತದೆ. ಜೆಟ್ಟಿಯ ಹಿಂದೆ ಕೆಂಪು ಬಸ್ಸುಗಳು ನಿಲ್ಲುತ್ತವೆ. ಕಡವು ದಾಟುವುದಷ್ಟೆ ಬೇಕಾದದ್ದು. ಆ ಬಸ್ಸುಗಳಲ್ಲೊಂದನ್ನು ಏರಿ ಪಾರಾಗಬಹುದು. ದಾಟಲು ಹಣ ಕೊಡಬೇಕಾಗಿಲ್ಲ.

* * *

ದೋಣಿ ಆ ಕಡೆಯ ದ್ವೀಪದಲ್ಲಿತ್ತು. ಟಿಕೆಟ್ ಕೊಂಡು ಜಯ ಜೆಟ್ಟಿಯಲ್ಲಿ ಕಾದುನಿಂತ. ಆ ಕಡೆಯ ದ್ವೀಪದಲ್ಲಿ ಎದ್ದು ಕಾಣುವ ಬಿಳಿಯ ಶಿಲುಬೆಯನ್ನು ಅವನು ಆಗಲಷ್ಟೇ ಕಂಡದ್ದು. ಅದು ಇಗರ್ಜಿಯ ಶಿಖರ ಎಂಬುದನ್ನು ಅವನು ತಿಳಿದುಕೊಂಡ. ಗಮನಿಸಿ ನೋಡಿದಾಗ ತೆಂಗಿನ ಮರಗಳೆಡೆಯಿಂದ ಇಗರ್ಜಿಯ ಬಿಳಿಯ ಗೋಡೆಗಳು, ಕಮಾನುಗಳೂ ಕಂಡುಬಂದುವು. ಅವೆಲ್ಲವೂ ಹೊಸದಾಗಿ ಕಟ್ಟಿಸಿದ್ದು. ಐದು ವರ್ಷಗಳಲ್ಲಿ ಹಲವು ಬದಲಾವಣೆಗಳುಂಟಾದುದನ್ನು ಆತ ಗಮನಿಸಿದ. ಮತ್ತಷ್ಟು ಅಧಿಕ ವೇಗದ ದೊಡ್ಡ ದೋಣಿಗಳು ಈಗಿರುವುದು. ಜೆಟ್ಟಿಯನ್ನು ನವೀಕರಿಸಲಾಗಿತ್ತು. ಐದು ವರ್ಷಕ್ಕೆ ಹಿಂದೆ ತಾನು ಒಟ್ಟೊಟ್ಟಿಗೆ ಎರಡು ಬಾರಿ ಗ್ರೇಸಿ ಮೇಡಂನ್ನು ಕಾಣಲು ಹೋದಾಗ ಎಲ್ಲವೂ ಹಳೆಯ ರೀತಿಯದ್ದಾಗಿತ್ತು. ಮೊದಲ ಬಾರಿ ನಾನು ಮದುವೆ ಮಾಡಿಕೊಳ್ಳುತ್ತೇನೆ ಎನ್ನುವ ವಿಚಾರವನ್ನು ತಿಳಿಸುವುದಕ್ಕೆ. ಎರಡನೆಯ ಬಾರಿ ಹೆಂಡತಿಯ ಜೊತೆಗೆ. ಆ ಬಳಿಕ ಅವರನ್ನು ಕಾಣಲು ಹೋಗದುದಕ್ಕಾಗಿ ತನ್ನನ್ನೇ ಹಳಿದುಕೊಂಡ. ಈ ದುರಂತದ ಬೀಜವನ್ನು ಅಂದೇ ಬಿತ್ತಲಾಗಿತ್ತು ಎಂದೂ ಮತ್ತೆ ನಡುವೆ ಒಮ್ಮೆಯಾದರೂ ಬಂದು ಅವರನ್ನು ಕಾಣಲು ಸಾಧ್ಯವಾಗಿರುತ್ತಿದ್ದರೆ ಅದನ್ನು ನಿವಾರಿಸಬಹುದಾಗಿತ್ತು ಎಂದೂ ಅವನಿಗನಿಸಿತು.

'ಸಿಸ್ಟರ್ ಪೋಳಿನ್ ತೀರಿಕೊಂಡರು. ಅನುಕೂಲವಾದರೆ ಬಂದು ಕಾಣಬೇಕು' ಎಂಬುದಾಗಿ ಬಂದ ತಂತಿ ಅವನ ಜೇಬಿನಲ್ಲಿದ್ದಿತು. ಕಳುಹಿಸಿದ್ದು ಒಬ್ಬ ರೆವರೆಂಡ್ ಫಾದರ್. 'ಇಗ್ನೇಷಿಯಸ್' ಎಂದೋ ನೆನಪಿಲ್ಲ. ತಂತಿಯನ್ನು ಜೇಬಿನಿಂದ ಹೊರತೆಗೆಯಬೇಕೆಂದು ಅವನಿಗೆ ತೋರಲಿಲ್ಲ.

ದೋಣಿ ಜೆಟ್ಟಿ ಸೇರಿತು. ಇತರ ಯಾತ್ರಿಕರ ಜತೆ ಜಯನೂ ದೋಣಿಯನ್ನೇರಿದ. ದೋಣಿಯ ಒಂದು ಪಕ್ಕದಲ್ಲಿ ಕುಳಿತು ಒಲೆದು ಹೋಗುತ್ತಿರುವ ಅಲೆಗಳನ್ನು ನೋಡಿದಾಗ ಗ್ರೇಸಿ ಮೇಡಂ ಹೇಳಿದುದು ನೆನಪಿಗೆ ಬಂತು.

ಜಯ, ನಾನು ಸನ್ಯಾಸಿನಿಯಾಗುವುದಕ್ಕೆ ಅರ್ಹಳಲ್ಲವೆನಿಸುತ್ತದೆ. ಈ ದ್ವೀಪ ನನಗೊಂದು ಕಾರಾಗೃಹವಾಗಿ ತೋರುತ್ತಿದೆ. ಒಮ್ಮೆ ನಾನು ಇಲ್ಲಿಂದ ಪಾರಾಗುತ್ತೇನೆ. ಕಡವಿನ ಟಿಕೆಟ್‌ನ ಕುರಿತು ನಾನು ಹೇಳಿದ್ದು ಯಥಾರ್ಥವಾಗಿದೆ. ನನ್ನ ಪ್ರಯಾಣ ಅರ್ಧವಷ್ಟೆ ಮುಗಿದಿದೆ ಎಂಬ ಅನ್ನಿಸಿಕೆಯನ್ನು ಆ ಟಿಕೆಟ್ ನನಗೆ ಕೊಡುತ್ತಿದೆ. ಅದನ್ನು ನನ್ನ ಡೈರಿಯಲ್ಲಿ ಜೋಪಾನವಾಗಿರಿಸಿದ್ದೇನೆ. ಆಗಾಗ ಅದನ್ನು ತೆಗೆದು ನೋಡುತ್ತೇನೆ. ಈ ಕಡವು ದಾಟುವುದಕ್ಕೆ ನನಗದರ ಅಗತ್ಯವಿಲ್ಲ. ಆದರೆ ಅದು ನನಗೆ ಎಂದಾದರೂ ಒಮ್ಮೆ ಪಾರಾಗಬಹುದೆಂಬ ಆಶೆ ಹುಟ್ಟಿಸುತ್ತದೆ. ತುಂಬಾ ಸಮಾಧಾನವನ್ನೂ ಕೂಡ.

ಜಯನು ಮದುವೆಯಾಗುತ್ತಾನೆಂದು ತಿಳಿದಾಗ ನನಗೆಷ್ಟು ಸಂತೋಷವಾಗಿದೆ ಎಂತಲಾ. ಫೋಟೋದಲ್ಲಿ ಕಂಡಾಗ ಹುಡುಗಿ ಚೆನ್ನಾಗಿದ್ದು ಸಾಧು ಸ್ವಭಾವದವಳಂತೆ ಕಾಣುತ್ತಾಳೆ. ಜತೆಗೆ ಜಯ ಇನ್ನು ನನ್ನ ಪಾಲಿಗೆ ಇಲ್ಲವಾಗುತ್ತಾನೆಂಬ ಅನ್ನಿಸಿಕೆಯನ್ನು ಮಾತ್ರ ಅಡಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಜಯ ಆರಾರು ತಿಂಗಳಿಗೊಮ್ಮೆ ಬರುತ್ತಿದ್ದಾಗ ನನ್ನ ಪಾಲಿಗೆ ಇಲ್ಲವಾದಂತೆನಿಸಿರಲಿಲ್ಲ. ಈಗ ಏನೋ ನನಗೆ ಹಾಗೊಂದು ಅನ್ನಿಸಿಕೆ. ಮದುವೆಯಾದರೂ ತಾನು ಬರುತ್ತೇನೆಂದು ಮಾತು ಕೊಟ್ಟಿದ್ದೆ. ಆದರೆ ಒಮ್ಮೆ ಹೆಂಡತಿಯನ್ನು ತೋರಿಸುವುದಕ್ಕಾಗಿ ಮಾತ್ರ ಹೋದದ್ದು. ಮತ್ತೆ ಐದು ವರ್ಷಗಳ ಕಾಲ ಯಾಕೋ ಹೋಗುವುದಕ್ಕೆ ಆಗಿರಲಿಲ್ಲ. ಒಂದು ಸಲ ಬಂದು ಕಾಣಲು ಸಾಧ್ಯವೋ ಎಂಬುದಾಗಿ ವಿಚಾರಿಸಿ ಒಮ್ಮೆ ಅವರದೊಂದು ಪತ್ರ ಬಂದಿತ್ತು. ಸದ್ಯದಲ್ಲಿಯೇ ಬರುವೆನೆಂದು ಉತ್ತರ ಬರೆದಿದ್ದ. ಆ ಮಧ್ಯೆ ತನ್ನದೇ ಪ್ರಾರಬ್ಧಗಳು, ಉದ್ಯೋಗ, ವರ್ಗ, ಮಕ್ಕಳು, ಓದು.

ದೋಣಿಯಿಂದಿಳಿದು ಜಯ ನಡೆದ. ಇಗರ್ಜಿ ಹಳೆಯ ಶಾಲೆಯ ಸಮೀಪದಲ್ಲಿಯೇ ಇತ್ತು. ಅಂಗಳದ ತುಂಬ ಜನ ಸೇರಿದ್ದರು. ಇಗರ್ಜಿಯ ಒಳಗೂ ಜನ ತುಂಬಿದ್ದರು. ಹೆಂಗಸರು, ಬಿಳಿಯ ತಲೆವಸ್ತ್ರ ಧರಿಸಿದ್ದರು. ಇಗರ್ಜಿಯ ಒಳಗಿದ್ದ ಒಬ್ಬಾಕೆ ಸನ್ಯಾಸಿನಿ ಜಯನನ್ನು ಗುರುತಿಸಿದಳು. ಅವಳು ಹತ್ತಿರ ಬಂದು ಕೇಳಿದಳು.

"ಜಯ ಅಲ್ಲವೆ?"

"ಹೌದು."

ಸಿಸ್ಟರ್ ಪೋಳಿನ್ ಅಲ್ಲಿದ್ದಾರೆ. ಆಕೆ ಜಯನನ್ನು ಮುಂದಕ್ಕೆ ಕರೆದೊಯ್ದಳು. ಬಲಿ ಪೀಠದ (Altar) ಮುಂದೆ ಶವಮಂಚದಲ್ಲಿ ಗ್ರೇಸಿ ಮೇಡಂ ಮಲಗಿದ್ದರು. ಮುಖ ಮಾತ್ರವೇ ಹೊರಗೆ ಕಾಣಿಸುತ್ತಿತ್ತು. ಶವ ಮಂಚವನ್ನು ಪೂರ್ಣವಾಗಿ ಹೂಗಳಿಂದ ಮುಚ್ಚಲಾಗಿತ್ತು. ತಾನು ಹೂಗಳನ್ನು ತರದುದಕ್ಕಾಗಿ ವ್ಯಥೆಯಾಯಿತು ಜಯನಿಗೆ. ಅಲ್ಲವಾದರೂ ನಾನೆಂದು ಮೇಡಂಗೆ ಹೂಗಳನ್ನು ಕೊಟ್ಟಿದ್ದದ್ದು?

ಅವರ ಮುಖ ಶಾಂತವಾಗಿತ್ತು. ಮರಣದಲ್ಲೂ ಮನೋಹರವಾಗಿತ್ತು. ಆತ ಅವರ ಕಾಲುಗಳ ಸಮೀಪ ಮೊಣಕಾಲೂರಿ ನಿಂತುಕೊಂಡ. ವಯಸ್ಸಾದ ಪಾದ್ರಿಯೊಬ್ಬ ಅವನ ಹತ್ತಿರ ಬಂದು ಹೆಗಲ ಮೇಲೆ ಕೈಯಿರಿಸಿದ. ಜಯ ಎದ್ದು ನಿಂತ.

ದೊಡ್ಡದಲ್ಲ ಮಗು.

ಕರವಸ್ತ್ರದಿಂದ ಜಯ ಕಣ್ಣೊರಸಿಕೊಂಡ.

ಫಾದರ್. ಆತ ಕೇಳಿದ, ಸಿಸ್ಟರ್ ತೀರಿಕೊಂಡದ್ದು ಹೇಗೆ? ಪಾದ್ರಿ ಒಂದು ನಿಮಿಷ ಕಣ್ಣು ಮುಚ್ಚಿ ಧ್ಯಾನಮಗ್ನವಾಗಿ ನಿಂತರು. ಪ್ರಶ್ನೆ ಅವರನ್ನು ನೋಯಿಸಿತೆಂದು ತೋರಿತು. ಸುಕ್ಕುಗಟ್ಟಿದ್ದ ಮುಖದ ಜೋಲುವ ಪೇಶಿಗಳನ್ನು ಒರೆಸಿಕೊಂಡರು. ದುರ್ಬಲವಾದ ತುಟಿಗಳು ಪ್ರಾರ್ಥನೆಯಲ್ಲಿ ನಿರತವಾದುವು. ಅನಿರ್ವಚನೀಯವಾದ ಸ್ನೇಹದ ಸೆಲೆ ಆ ಮುದಿ ಕಣ್ಣುಗಳನ್ನು ಒದ್ದೆಗೊಳಿಸಿತು. ಸಾವಧಾನವಾಗಿ ಕಣ್ಣು ತೆರೆದು ಶಿಲುಬೆಯ ಚಿಹ್ನೆ ಬರೆದ ಬಳಿಕ ಆತ ಹೇಳಿದರು.

"ಅವಳನ್ನು ಸೃಷ್ಟಿಕರ್ತ ಕರೆದ. ಅವಳು ಹೋದಳು. ಅವಳ ಆತ್ಮಕ್ಕೆ ಶಾಂತಿ ಲಭಿಸಲಿ."

ಬಲಿಪೀಠದ ಹತ್ತಿರ ಇಟ್ಟಿದ್ದ ಮೇಜಿನ ಹಿಂದೆ ನಾಲ್ವರು ವೈದಿಕರು ಕೆಂಪು ಮತ್ತು ಬಿಳಿಯ ತಾಂತ್ರಿಕ ವೇಷದಲ್ಲಿ ಬಂದು ನಿಂತುಕೊಂಡರು. ಪವಿತ್ರ ಕುರ್ಬಾನ್ (ಕ್ರೈಸ್ತರು ಇಗರ್ಜಿಯಲ್ಲಿ ಕೈಗೊಳ್ಳುವ ಪ್ರಾರ್ಥನೆ) ತೊಡಗುತ್ತಿದೆ. ಜಯ ನಿಧಾನವಾಗಿ ಹಾಲಿನ ಹಿಂಭಾಗಕ್ಕೆ ನಡೆದ.

ಬೋಟಿನಲ್ಲಿ ಹಿಂತಿರುಗಿ ಹೋಗುವಾಗ ಊರ ಗದ್ದೆ ಬಯಲಿನ ಭತ್ತದ ಪೈರನ್ನು ನೆನಪಿಸಿಕೊಂಡ. ಬಾಗಿ ನಿಂತ ಭತ್ತದ ತೆನೆಯಿಂದ ಮಾಗಿದ ಭತ್ತದ ಕಾಳುಗಳನ್ನು ಎಳೆದು ತೆಗೆದು ಬದುವಿನಲ್ಲಿ ಉತ್ಸಾಹದಿಂದ ನಡೆಯುತ್ತ ಮೇಡಂನ ಮನೆಗೆ ಟ್ಯೂಷನ್‌ಗೆ ಹೋಗುತ್ತಿದ್ದುದು. ತಾನು ಬಾಗಿಲು ದಾಟಿ ಬರುತ್ತಿದ್ದುದನ್ನು ಪಡಸಾಲೆಯ ಕುರ್ಚಿಯಲ್ಲಿ ಕುಳಿತು ಅವರು ನೋಡುತ್ತಿದ್ದರು. ಅದೆಲ್ಲವೂ ಸ್ಥಳ, ಕಾಲ, ಪರಿಮಿತಿಗಳಿಗೆ ಮೀರಿದ್ದೋ ಕೌಮಾರ್ಯ ಲೋಕದ ಕೈಗೆಟುಕದ ಎತ್ತರದಲ್ಲಿ ಬರೆದಿಟ್ಟ ಚಿತ್ರಗಳಂತೆ ಆತನಿಗೆ ತೋರಿತು. ಇನ್ನು ಯಾವುದೂ ಅವನ ಜೀವನದಲ್ಲಿ ನಡೆಯಲಾರದು ಎಂಬ ಅರಿವು ಆತನನ್ನು ದುರ್ಬಲಗೊಳಿಸಿತು.

ಇಗರ್ಜಿಯ ಜನಗಳೂ ಬಹಳ ಹಿಂದೆ ಉಳಿದರು ಎಂಬುದು ಖಚಿತವಾದಾಗ ಆತ ಜೇಬಿನಿಂದ ಮೇಡಂನ ಪತ್ರವನ್ನು ಹೊರಗೆ ತೆಗೆದ. ಹೊರಟು ಬರುವಾಗ ಫಾದರ್ ಜೇಬಿನಿಂದ ತೆಗೆದು ಅವನಿಗೆ ಕೊಟ್ಟಿದ್ದ ಪತ್ರವಾಗಿತ್ತು ಅದು. ಎರಡೇ ವಾಕ್ಯಗಳು,

— ಜಯ,

ನನ್ನ ಪಯಣವನ್ನು ಪೂರ್ಣಗೊಳಿಸುವುದು ಸಾಧ್ಯವಾಗಲಿಲ್ಲ. ನನ್ನನ್ನು ಕ್ಷಮಿಸಬೇಕು.

ಪ್ರೇಮದಿಂದ

ಗ್ರೇಸಿ ಮೇಡಂ



BACK TO MAIN PAGE